## ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು
## ಕೃಷಿ ಮಹಾವಿದ್ಯಾಲಯ

ಸಂ: ಡೀನ್(ಕೃಷಿ)/ಬೆಂ/ಕೋವಿಡ್–19/2022–23/2403 ದಿನಾಂಕ: 30–12–2022

**ಟಿಪ್ಪಣಿ:**

ವಿಷಯ: ಕೃಷಿ ಮಹಾವಿದ್ಯಾಲಯದಲ್ಲಿ ಕೋವಿಡ್–19 ರ ನಿಯಮವನ್ನು ಪಾಲಿಸುವ ಬಗ್ಗೆ.

ಉಲ್ಲೇಖ: 1. No. NVBDCP/EST-72/Covid-19/2020-21, dated. 22.12.2022

2. ಸಂಖ್ಯೆ: ಆಕ/ಸಾ.ವಿ/3791/2022–23, ದಿನಾಂಕ 27.12.2022

----

ಉಲ್ಲೇಖಿತ (1) ರಲ್ಲಿ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಕರ್ನಾಟಕ ಸರ್ಕಾರ ರವರು ಕೋವಿಡ್–19 ಸಲಹೆಯನ್ನು ನೀಡಿದ್ದು, ಅದರಲ್ಲಿ ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿ ಕೋವಿಡ್–19 ಪರಿಸ್ಥಿತಿ ನಿಯಂತ್ರಣದಲ್ಲಿದೆ. ಅದಾಗ್ಯೂ, ಕೆಲವು ದೇಶಗಳಲ್ಲಿ ಉದಯೋನ್ಮುಖ ಕೋವಿಡ್–19 ಬೆಳಕಿಗೆ ಬಂದಿದ್ದು, ಕರ್ನಾಟಕ ರಾಜ್ಯದಲ್ಲಿ ಮುಂಜಾಗ್ರತಾ ಕ್ರಮವಹಿಸಿ ಕೋವಿಡ್–19ರ ನಿಯಮಾವಳಿಗಳನ್ನು ಪಾಲಿಸಲು ಹಾಗೂ ಸಭೆ ಸಮಾರಂಭಗಳಲ್ಲಿ, ಒಳಾಂಗಣ ಕಾರ್ಯಕ್ರಮಗಳಲ್ಲಿ ಕಛೇರಿ ಮತ್ತು ಶಾಲಾ ಕಾಲೇಜುಗಳಲ್ಲಿ (ಮುಸಕು) ಮಾಸ್ಕ್‌ನ್ನು ಧರಿಸುವಂತೆ ಆದೇಶಿಸಲಾಗಿರುತ್ತದೆ. ಆದ್ದರಿಂದ, ಕೃಷಿ ವಿಶ್ವವಿದ್ಯಾನಿಲಯದ ಆಡಳಿತಾಧಿಕಾರಿಗಳು, ಉಲ್ಲೇಖ (2) ರಲ್ಲಿ ಕೋವಿಡ್–19 ಗೆ ಸಂಬಂಧಿಸಿದ ಸಲಹೆ/ಸೂಚನೆಗಳನ್ನು ಪಾಲಿಸಲು ತಿಳಿಸಿರುತ್ತಾರೆ. ಅದರಂತೆ, ಕೃಷಿ ಮಹಾವಿದ್ಯಾಲಯದ ಬೋಧಕರು, ಬೋಧಕೇತರ ನೌಕರರು ಮತ್ತು ವಿದ್ಯಾರ್ಥಿಗಳು ಮಾಸ್ಕ್‌ನ್ನು ಕಡ್ಡಾಯವಾಗಿ ಧರಿಸಿ ಕೋವಿಡ್–19 ರ ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸುವುದು. ಅಲ್ಲದೆ, ಮುಂಜಾಗ್ರತಾ ಕ್ರಮವಾಗಿ ಕೋವಿಡ್ 19 ಲಸಿಕೆಯ ಡೋಸ್‌ನ್ನು ಪಡೆದುಕೊಳ್ಳಬೇಕು.

ಡೀನ್ (ಕೃಷಿ)

30/12/22

ಡೀನ್
ಕೃಷಿ ಮಹಾ ವಿದ್ಯಾಲಯ
ಕೃ.ವಿ.ವಿ., ಗಾ.ಕೃ.ವಿ.ಕೇ. ಬೆಂಗಳೂರು-

ಪ್ರತಿಯನ್ನು:

1. ಶಿಕ್ಷಣ ನಿರ್ದೇಶಕರು, ಕೃವಿವಿ., ಜಿಕೆವಿಕೆ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ
2. ಡೀನ್ (ಸ್ನಾತಕೋತ್ತರ), ಕೃವಿವಿ., ಜಿಕೆವಿಕೆ, ಬೆಂಗಳೂರು ರವರ ಮಾಹಿತಿಗಾಗಿ
3. ಡೀನ್ (ವಿದ್ಯಾರ್ಥಿ ಕಲ್ಯಾಣ), ಕೃಷಿ ವಿಶ್ವವಿದ್ಯಾನಿಲಯ, ರವರ ಮಾಹಿತಿಗಾಗಿ

ಗೆ,

1. ವಿಶೇಷಾಧಿಕಾರಿಗಳು, ಕೃಷಿ ಇಂಜಿನಿಯರಿಂಗ್ ಕಾಲೇಜು, ಜಿಕೆವಿಕೆ, ಬೆಂಗಳೂರು ರವರು ತಮ್ಮ ಕಾಲೇಜು ಬೋಧಕ / ಬೋಧಕೇತರ ಸಿಬ್ಬಂದಿ ರವರಿಗೆ ಸೂಕ್ತ ಮಾಹಿತಿಯನ್ನು ನೀಡುವುದು.
2. ಎಲ್ಲಾ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಕೃಷಿ ಮಹಾವಿದ್ಯಾಲಯ, ಜಿಕೆವಿಕೆ ರವರು ತಮ್ಮ ವಿಭಾಗದ ಬೋಧಕ / ಬೋಧಕೇತರ ಸಿಬ್ಬಂದಿ ರವರಿಗೆ ಸೂಕ್ತ ಮಾಹಿತಿಯನ್ನು ನೀಡುವುದು.
3. ಮುಖ್ಯ ನಿಲಯಪಾಲಕರು / ನಿಲಯಪಾಲಕರು, ಸ್ನಾತಕ ಬಾಲಕ / ಬಾಲಕಿಯರ ವಿದ್ಯಾರ್ಥಿನಿಲಯ, ಜಿಕೆವಿಕೆ, ಬೆಂಗಳೂರು ರವರು ಸೂಕ್ತ ಕ್ರಮಕ್ಕಾಗಿ
4. ಸ್ನಾತಕ ಪದವಿಗಳ ವಿದ್ಯಾರ್ಥಿ ಪ್ರತಿನಿಧಿಗಳು ತಮ್ಮ ವಿಭಾಗದ ಸ್ನಾತಕ ವಿದ್ಯಾರ್ಥಿಗಳಿಗೆ ಸೂಕ್ತ ಮಾಹಿತಿಯನ್ನು ನೀಡುವುದು
5. ಕಡತಕ್ಕೆ.